ದಿನಾಂಕಃ 22-08-2025 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಶ್ರೀಮತಿ. ಟಿ. ಕೆ. ಆರ್. ವಕೀಲರಿಂದಃ

ನಾನು ಫಿರ್ಯಾದುದಾರರ ಪರ ಸಾಕ್ಷಿದಾರನಾಗಿದ್ದು, ಇಂದು ನಾನು ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ಹಾಜರುಮಾಡಿದ್ದು, ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿರುತ್ತದೆ. ಅದರಲ್ಲಿ ಇರುವ ಸಹಿಗಳು ನನ್ನದೇ ಇರುತ್ತವೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀ. ಎಂ. ಇ. ಹೆಚ್. ವಕೀಲರಿಂದ

ನಾನು ಸರ್ಕಾರಿ ನೌಕರ ಎಂದರೆ ಸರಿ. ದಿನಾಂಕಃ 19-04-2022 ರಂದು ನಾನು ನನ್ನ ಕೆಲಸಕ್ಕೆ ಹಾಜರಾಗಿದ್ದೆನು. ನನ್ನ ಕೆಲಸದ ಅವಧಿ ಸಂಜೆ 05 – 00 ಗಂಟೆಯವರೆಗೆ ಇರುತ್ತದೆ. ದಿನಾಂಕಃ 19-04-2022 ರಂದು ನಾನು ಸಂಜೆ 04 - 50 ಗಂಟೆಗೆ ನನ್ನ ಕಛೇರಿಯಿಂದ ಹೊರಟಿದ್ದೆನು. ಆ ರೀತಿ ನಾನು 04 - 50 ಗಂಟೆಗೆ ಕಛೇರಿಯಿಂದ ಹೊರಗೆ ಹೋಗಲು ನಾನು ನನ್ನ ಹಿರಿಯ ಅಧಿಕಾರಿಗಳಿಂದ ಸದರಿ ದಿನದಂದು ಅಪ್ಪಣೆ ಪಡೆದಿದ್ದೆನು. 04 – 50 ಗಂಟೆಗೆ ಕಛೇರಿಯಿಂದ ಹೊರಟ ಬಗ್ಗೆ ನಾನು ನಮ್ಮ ಕಛೇರಿಯ Movement Register ನಲ್ಲಿ ನಮೂದು ಮಾಡಿರಲಿಲ್ಲ. ಫಿರ್ಯಾದುದಾರರು ನನಗೆ ಕಳೆದ 5 ವರ್ಷಗಳಿಂದ ಪರಿಚಯ ಇರುತ್ತಾರೆ. ಫಿರ್ಯಾದುದಾರರು ಈ ಪ್ರಕರಣವನ್ನು ಯಾವ ಕಾರಣಕ್ಕೆ ದಾಖಲು ಮಾಡಿರುತ್ತಾರೆ ಎಂಬ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನನ್ನ ಸಮಕ್ಷಮ ಹಣ ನೀಡಿರುತ್ತಾರೆ ಎಂದು ಫಿರ್ಯಾದುದಾರರು ದೂರಿನಲ್ಲಿ ನಮೂದು ಮಾಡಿರುತ್ತಾರೆ. ದಿನಾಂಕಃ 19-04-2022 ಕ್ಕೂ ಮೊದಲೇ ನನಗೆ ಆರೋಪಿ ಪರಿಚಯ ಇದ್ದರು.

2. ಮೈಸೂರು ರಸ್ತೆಯಲ್ಲಿ ಇರುವ ಅಂಗಡಿಯ ಬಳಿ ಹೋಗಿದ್ದೆವು ಎಂದು ಹೇಳಿದ್ದು ಸದರಿ ಅಂಗಡಿಗೆ ಹೆಸರು ಇರಲಿಲ್ಲ. ನಾವು ಅಂಗಡಿಯ ಬಳಿ ಹೋಗಿದ್ದೆವು ಎಂದು ಹೇಳಿದ್ದು ಸದರಿ ಅಂಗಡಿಯಲ್ಲಿ ಆರೋಪಿ ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಅಂಗಡಿ ಆರೋಪಿಯ ಅಂಗಡಿ ಆಗಿದ್ದು ಅವರು ಅದರಲ್ಲಿ ಕಾಳು ಹಾಗು ರಾಗಿ ವ್ಯಾಪಾರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಅಂಗಡಿ ಮೈಸೂರು ರಸ್ತೆಯಲ್ಲಿರುವ ಬರ್ಕತ್ ಶಾದಿ ಮಹಲ್ ಪಕ್ಕದಲ್ಲಿ ಇರುತ್ತದೆ ಎಂದರೆ ಸಾಕ್ಷಿ ಎದುರುಗಡೆ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿ ಸದರಿ ಅಂಗಡಿಯ ಮಾಲೀಕರು ಆಗಿರುವುದಿಲ್ಲ ಅವರ ಭಾವ ಸದರಿ ಅಂಗಡಿಯ ಮಾಲೀಕರು ಆಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಅಂಗಡಿಯ ಬಳಿ ಹೋಗಿದ್ದೆ ಎಂದು ಹೇಳಿದ್ದು ಸದರಿ ಸ್ಥಳದಲ್ಲಿ ಆರೋಪಿಯ ಯಾವುದೇ ಅಂಗಡಿ ಇರುವುದಿಲ್ಲ ಆರೋಪಿಯು ಭಾರತ್ ಪೆಟ್ರೋಲ್ ಬಂಕ್ ಎದುರು ಇರುವ ಜೈನುಲ್ಲಾ ರವರ ಕಬ್ಬಿಣದ ಅಂಗಡಿಯಲ್ಲಿ ದಿನಗೂಲಿ ನೌಕರನಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ದಿನದಂದು ನಮ್ಮ ಜೊತೆ ಕೃಷ್ಣೇಗೌಡ ಎಂಬುವವರು ಇದ್ದರು ಎಂದು ಹೇಳಿದ್ದು ಅವರು ಉಪ್ಪಾರಹಳ್ಳಿ ಗ್ರಾಮದವರು ಇರುತ್ತಾರೆ. ಸದರಿ ಕೃಷ್ಣೇಗೌಡ ಸಂದೀಪ ರವರ ಚಿಕ್ಕಪ್ಪ ಇರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

3. ನಾನು, ಕೃಷ್ಣೇಗೌಡ ಹಾಗೂ ಫಿರ್ಯಾದುದಾರರು ಒಟ್ಟಿಗೆ ಫಿರ್ಯಾದುದಾರರ ಮನೆಗೆ ಹೋಗಿದ್ದೆವು. ಅದಕ್ಕೂ ಮೊದಲು ಆರೋಪಿ ಹಾಗೂ ಫಿರ್ಯಾದುದಾರರ ನಡುವೆ ಯಾವುದಾದರು ಮಾತುಕತೆ ಆದ ಬಗ್ಗೆ ನನಗೆ ಗೊತ್ತಿಲ್ಲ. ಫಿರ್ಯಾದುದಾರ ಸಂದೀಪ ರವರಿಗೆ 15 ಎಕರೆ ಜಮೀನು ಇದ್ದು ಅದರಲ್ಲಿ ಅವರು ಸುಮಾರು 900 ತೆಂಗಿನ ಮರಗಳನ್ನು ಬೆಳೆದಿರುತ್ತಾರೆ. ಸದರಿ 15 ಎಕರೆ ಜಮೀನು ಫಿರ್ಯಾದುದಾರರ ತಂದೆ ನಾಗೇಗೌಡರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಜಮೀನಿನ ವ್ಯವಹಾರವನ್ನು ಫಿರ್ಯಾದುದಾರರು ನೋಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಫಿರ್ಯಾದುದಾರರು ಯಾವುದಾದರೂ ಸಾಲ ಮಾಡಿರುತ್ತಾರೋ

ಇಲ್ಲವೋ ನನಗೆ ಗೊತ್ತಿಲ್ಲ. ಫಿರ್ಯಾದುದಾರರ ವಾರ್ಷಿಕ ಆದಾಯ ಎಷ್ಟು ಇರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಫಿರ್ಯಾದುದಾರರು ಒಟ್ಟು ಕುಟುಂಬದಲ್ಲಿ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

4. ಆರೋಪಿಗೆ ಹಣ ನೀಡುವ ಮೊದಲು ಅವರ ಆರ್ಥಿಕತೆಯ ಬಗ್ಗೆ ಫಿರ್ಯಾದುದಾರರು ವಿಚಾರಿಸಿದ್ದು ಕೈ ಸಾಲ ತೀರಿಸಲು ಹಾಗೂ ಕಾಳು ವ್ಯಾಪಾರ ಮಾಡಲು ಹಣದ ಅವಶ್ಯಕತೆ ಇದೆ ಎಂದು ಆರೋಪಿ ಹೇಳಿದ್ದರು. ಹಣ ಪಡೆದ ನಂತರ ಆರೋಪಿ ಫಿರ್ಯಾದುದಾರರಿಗೆ ಒಂದು ಚೆಕ್ಕನ್ನು ನೀಡಿದ್ದರು. ಬೇರೆ ಯಾವುದೇ ದಾಖಲೆಗಳನ್ನು ನೀಡಿರಲಿಲ್ಲ. ಆರೋಪಿಯು ನಮ್ಮ ಎದುರೇ ಸದರಿ ಚೆಕ್ಕನ್ನು ಭರ್ತಿ ಮಾಡಿರುತ್ತಾರೆ. ಸದರಿ ಚೆಕ್ಕು ನಿಪಿ.1 ರ ಚೆಕ್ಕು ಇರುತ್ತದೆ. ನಿಪಿ.1 ರಲ್ಲಿ ಇರುವ ಸಹಿಗೂ ಇತರೆ ಬರವಣಿಗೆಗಳಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ ಫಿರ್ಯಾದುದಾರರಿಂದ ಯಾವುದೇ ಹಣ ಕೇಳಿರಲಿಲ್ಲ ಮತ್ತು ಫಿರ್ಯಾದುದಾರರು ಆರೋಪಿಗೆ ಯಾವುದೇ ಹಣ ನೀಡಿರಲಿಲ್ಲ ಮತ್ತು ನನ್ನ ಸಮಕ್ಷಮ ಅವರ ನಡುವೆ ಯಾವುದೇ ವ್ಯವಹಾರ ಆಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಹಾಗೂ ಫಿರ್ಯಾದುದಾರರ ಭಾವ ಸತೀಶ್ ರವರ ನಡುವೆ 2016 ನೇ ಇಸವಿಯಲ್ಲಿ ವ್ಯವಹಾರ ನಡೆದಿದ್ದು ನಿಪಿ.1 ರ ಚೆಕ್ಕನ್ನು ಆರೋಪಿ 2016 ನೇ ಇಸವಿಯಲ್ಲಿ ಸದರಿ ಸತೀಶ್ ರವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ಫಿರ್ಯಾದುದಾರರು ಭರ್ತಿ ಮಾಡಿಕೊಂಡು ಈ ಫಿರ್ಯಾದನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. 15 ಲಕ್ಷ ರೂಪಾಯಿಗಳನ್ನು ನೀಡುವಷ್ಟು ಆರ್ಥಿಕ ಚೈತನ್ಯವನ್ನು ಫಿರ್ಯಾದುದಾರರು ಹೊಂದಿರಲಿಲ್ಲ ಎಂದರೆ ಸರಿಯಲ್ಲ. 15 ಲಕ್ಷ ರೂಪಾಯಿಗಳನ್ನು ಪಡೆಯುವ ಅವಶ್ಯಕತೆ ಆರೋಪಿಗೆ ಇರಲಿಲ್ಲ ಮತ್ತು ಅಷ್ಟು ಹಣವನ್ನು ತೀರಿಸುವ ಸಾಮರ್ಥ್ಯವನ್ನು ಸಹ ಆರೋಪಿ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಫಿರ್ಯಾದುದಾರರ ಮಾತು ಕೇಳಿ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನನ್ನ ಸಮಕ್ಷಮ ಆರೋಪಿ ಫಿರ್ಯಾದುದಾರರಿಗೆ ಚೆಕ್ಕನ್ನು

ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಪರಿಚಯ ಇರುವುದಿಲ್ಲ ಮತ್ತು ನಾನು ಆರೋಪಿಯ ಅಂಗಡಿ ಬಳಿ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಫಿರ್ಯಾದುದಾರರ ಮಾತು ಕೇಳಿ ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನಾಗಮಂಗಲ.

ಸಾಕ್ಷಿದಾರರ ಸಹಿಃ